## ಪತ್ರಿಕಾ ಪ್ರಕಟಣೆ

ಸಾರಿಗೆ ಇಲಾಖೆಯಿಂದ ಸಾರ್ವಜನಿಕರಿಗೆ ನೀಡಲಾಗುತ್ತಿರುವ ಹಲವಾರು ಸೇವೆಗಳನ್ನು ಆನ್‌ಲೈನ್ ಮೂಲಕ ನೀಡಲು ಉದ್ದೇಶಿಸಿದೆ. ಸರಕು ಸಾಗಣೆ ಪರವಾನಗಿಗಳನ್ನು ಪಡೆಯಲು ಹಾಗೂ ವಾಹನಗಳ ಮಾಲೀಕತ್ವ ವರ್ಗಾವಣೆಗಳನ್ನು ಸಾರ್ವಜನಿಕರು ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಗಳಿಗೆ ಭೇಟಿ ನೀಡದೆ ತಾವು ಇದ್ದಲ್ಲಿಂದಲೇ ಆನ್‌ಲೈನ್ ಮೂಲಕ ಈ ಸೇವೆಗಳನ್ನು ಪಡೆಯುವಂತೆ ಈಗಾಗಲೇ ತಂತ್ರಾಂಶವನ್ನು ಸಿದ್ಧಪಡಿಸಿದ್ದು ಸದ್ಯದಲ್ಲೆ ಬಿಡುಗಡೆಗೊಳಿಸಲಾಗುವುದು.

ಇದಲ್ಲದೆ ನಕಲು ಚಾಲನಾ ಅನುಜ್ಞಾ ಪತ್ರ, ಚಾಲನಾ ಅನುಜ್ಞಾಪತ್ರ ನವೀಕರಣ, ನಕಲು ನೋಂದಣಿ ಪ್ರಮಾಣ ಪತ್ರ, ಬಿಡುಗಡೆ ಪ್ರಮಾಣ ಪತ್ರ ಇತ್ಯಾದಿಗಳನ್ನು ಸಂಪೂರ್ಣವಾಗಿ ಆನ್‌ಲೈನ್ ಮೂಲಕ ದೊರಕುವಂತೆ ಮಾಡಲು ಉದ್ದೇಶಿಸಲಾಗಿದೆ.

ಈ ಎಲ್ಲಾ ಆನ್‌ಲೈನ್ ಸೇವೆಗಳನ್ನು ಪಡೆಯಲು ಸಂಬಂಧಪಟ್ಟ ವ್ಯಕ್ತಿಯೇ ಅರ್ಜಿ ಸಲ್ಲಿಸಿರುವುದನ್ನು ಖಾತ್ರಿ ಪಡಿಸಿಕೊಳ್ಳಲು ವಾಹನ ನೋಂದಣಿ/ಚಾಲನಾ ಅನುಜ್ಞಾ ಪತ್ರ ಪಡೆಯುವ ಸಮಯದಲ್ಲಿ ನೀಡಲಾದ ಮೊಬೈಲ್ ಸಂಖ್ಯೆಗೆ ಓನ್‌ಟೈಮ್ ಪಾಸ್‌ವರ್ಡ್ (one time password) ಕಳುಹಿಸಲಾಗುವುದು. ಸಾರಿಗೆ ಇಲಾಖೆಯ ಸಾರಥಿ/ವಾಹನ್ ಡೆಟಾಬೇಸ್‌ಗಳಲ್ಲಿ ಇರುವ ಮೊಬೈಲ್ ಸಂಖ್ಯೆಗಳು ಸಂಬಂಧಪಟ್ಟ ವ್ಯಕ್ತಿಯದಾಗಿರದೆ ಬೇರೆಯವರ ಮೊಬೈಲ್ ಸಂಖ್ಯೆಯನ್ನು ನಮೂದಿಸಿರುವ ಹಲವಾರು ಪ್ರಕರಣಗಳು ಗಮನಕ್ಕೆ ಬಂದಿವೆ. ಆನ್‌ಲೈನ್ ಸೇವೆಯನ್ನು ಪಡೆಯಲು ವಾಹನ ಮಾಲೀಕರು/ಚಾಲನಾ ಅನುಜ್ಞಾಪತ್ರ ಹೊಂದಿರುವ ವ್ಯಕ್ತಿಯ ಮೊಬೈಲ್ ಸಂಖ್ಯೆಯನ್ನೇ ಬಳಸುವುದು ಅವಶ್ಯಕ ಇರುವುದರಿಂದ ಎಲ್ಲಾ ಸಂಬಂಧಪಟ್ಟವರು parivahan.gov.in ಪೋರ್ಟಲ್‌ನಲ್ಲಿ ತಮ್ಮ ಮೊಬೈಲ್ ಸಂಖ್ಯೆಗಳನ್ನು ಪರಿಷ್ಕರಿಸುವಂತೆ (update) ಈ ಮೂಲಕ ಕೋರಲಾಗಿದೆ.

ಆಯುಕ್ತರು 14/10/2020
ಸಾರಿಗೆ ಮತ್ತು ರಸ್ತೆ ಸುರಕ್ಷತೆ
ಬೆಂಗಳೂರು

16.10.2020

ವಿಜಯ ಕರ್ನಾಟಕ

**ಕೇಂದ್ರ ಸಚಿವರ ಸಭೆಯಲ್ಲಿ ಸವದಿ ಹೇಳಿಕೆ | ಅಪಘಾತ ತಡೆಗೆ ಗಡ್ಕರಿ ಪ್ರಶಂಸೆ**

# ರಾಜ್ಯಾದ್ಯಂತ ಇಂಟೆಲಿಜೆನ್ಸ್ ಟ್ರಾನ್ಸ್‌ಪೋರ್ಟ್ ಸಿಸ್ಟಂ ಶೀಘ್ರ

**ಬೆಂಗಳೂರು:** ರಾಜ್ಯ ಸಾರಿಗೆ ವ್ಯವಸ್ಥೆಯಲ್ಲಿ ವ್ಯಾಪಕ ಸುಧಾರಣೆಗಳನ್ನು ಕೈಗೊಂಡು ವಾಹನಗಳ ಅಪಘಾತಗಳಿಗೆ ಕಡಿವಾಣ ಹಾಕಿರುವುದಕ್ಕೆ ಕೇಂದ್ರ ಭೂ ಸಾರಿಗೆ, ಹೆದ್ದಾರಿ ಮತ್ತು ಸಾರಿಗೆ ಸಚಿವ ನಿತಿನ್ ಗಡ್ಕರಿ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.



ಸಾರಿಗೆ ಸಚಿವರೂ ಆಗಿರುವ ಡಿಸಿಎಂ ಲಕ್ಷ್ಮಣ ಸವದಿ ಅವರೊಂದಿಗೆ ಗುರುವಾರ ವರ್ಚುಯಲ್ ಸಭೆ ನಡೆಸಿ ಮಾಹಿತಿ ಪಡೆದ ಅವರು, "ಸದ್ಯದಲ್ಲಿಯೇ ಹೊಸದಿಲ್ಲಿಯಲ್ಲಿ ಸಭೆ ನಡೆಸಿ, ಕರ್ನಾಟಕದಲ್ಲಿ ಸಾರಿಗೆ ಮತ್ತು ಹೆದ್ದಾರಿ ವಿಸ್ತರಣೆ ಅನುಷ್ಠಾನಕ್ಕೆ ಕೈಗೊಳ್ಳಬೇಕಿರುವ ಕ್ರಮಗಳ ಬಗ್ಗೆ ರೂಪುರೇಷೆ ಸಿದ್ಧಪಡಿಸಲಾಗುವುದು," ಎಂದು ಭರವಸೆ ನೀಡಿದರು.

ಇದೇ ವೇಳೆ ಅಪಘಾತಗಳ ನಿಯಂತ್ರಣಕ್ಕೆ ಕೈಗೊಂಡಿರುವ ಕ್ರಮಗಳ ಕುರಿತು ಮಾಹಿತಿ ನೀಡಿದ ಸಚಿವ ಲಕ್ಷ್ಮಣ ಸವದಿ, "ಮೈಸೂರಿನಲ್ಲಿ 2015ರಿಂದ ಇಂಟೆಲಿಜೆನ್ಸ್ ಟ್ರಾನ್ಸ್‌ಪೋರ್ಟ್ ಸಿಸ್ಟಂ ಜಾರಿಗೆ ತಂದಿದ್ದು, ಇದರಿಂದ ಅಪಘಾತಗಳ ಪ್ರಮಾಣವು ಅರ್ಧದಷ್ಟು ಕಡಿಮೆಯಾಗಿದೆ. ಈ ಯಶಸ್ವಿ ಪ್ರಯೋಗವನ್ನು ರಾಜ್ಯದ ಇತರ ಕಡೆಗಳಲ್ಲೂ ಜಾರಿಗೊಳಿಸಲು ಪ್ರಯತ್ನಿಸಲಾಗುತ್ತಿದೆ," ಎಂದು ಹೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ಗಡ್ಕರಿ, "ಕರ್ನಾಟಕದಿಂದ ಐಟಿಎಸ್ ಬಗ್ಗೆ ವರದಿ ಪಡೆದು, ಈ ವ್ಯವಸ್ಥೆಯನ್ನು ದೇಶದ ಇತರೆಡೆಯೂ ಅನುಷ್ಠಾನಗೊಳಿಸಲಾಗುವುದು," ಎಂದರು.

"ಮಳವಳ್ಳಿಯಲ್ಲಿ ವಿಶ್ವಬ್ಯಾಂಕ್ ಮತ್ತು ಕೇಂದ್ರ ಸರ್ಕಾರದ ಸಹಯೋಗದಲ್ಲಿ ಚಾಲನಾ ಆಧಾರಿತ ಬಸ್ ಸಿಮ್ಯುಲೇಟರ್‌ಗಳನ್ನು ಅಳವಡಿಸಿ, ಚಾಲಕರಿಗೆ ವಿಶೇಷ ತರಬೇತಿ ನೀಡಲು ಕೇಂದ್ರ ಸ್ಥಾಪಿಸಲಾಗಿದೆ. ಹೆಚ್ಚು ಅಪಘಾತ ಸಂಭವಿಸುವ ವಲಯಗಳನ್ನು ಗುರುತಿಸಿ, ಸೂಕ್ತ ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು," ಎಂದು ಸವದಿ ಹೇಳಿದರು.

"ರಾಜ್ಯ ಸಾರಿಗೆ ಇಲಾಖೆಯಲ್ಲಿ ಕೇಂದ್ರದ ಸಹಭಾಗಿತ್ವದೊಂದಿಗೆ ಟೆಕ್ನಾಲಜಿ ಆಧಾರಿತ ಐಟಿಎಸ್ ಅಳವಡಿಸಲಾಗಿದೆ. ಆ ಮೂಲಕ ರಸ್ತೆ ಸುರಕ್ಷತೆಗೆ ಕಾರ್ಯ ಯೋಜನೆಗಳನ್ನು ರೂಪಿಸಲಾಗಿದೆ. ಇಂಟೆಲ್ ಸಂಸ್ಥೆಯ ರಾಯ್, ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಉಪಸ್ಥಿತರಿದ್ದರು.

ಸಂಯುಕ್ತ ಕರ್ನಾಟಕ

# ಶೀಘ್ರ ಆನ್‌ಲೈನ್‌ನಲ್ಲಿ ಸಾರಿಗೆ ಸೇವೆಗಳು

**ಬೆಂಗಳೂರು:** ಸರಕು ಸಾಗಣೆ ಪರವಾನಗಿಗಳನ್ನು ಪಡೆಯಲು ಹಾಗೂ ವಾಹನಗಳ ಮಾಲೀಕತ್ವ ವರ್ಗಾವಣೆಗಳನ್ನು ಸಾರ್ವಜನಿಕರು ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿಗೆ ಭೇಟಿ ನೀಡದೇ ತಾವು ಇದ್ದಲ್ಲಿಂದಲೇ ಆನ್‌ಲೈನ್ ಮೂಲಕ ಸೇವೆಗಳನ್ನು ಪಡೆಯಲು ತಂತ್ರಾಂಶವನ್ನು ಸಿದ್ಧಪಡಿಸಿದ್ದು ಸದ್ಯದಲ್ಲೇ ಬಿಡುಗಡೆಗೊಳಿಸಲಾಗುವುದು ಎಂದು ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತರು ತಿಳಿಸಿದ್ದಾರೆ.

ನಕಲು ಚಾಲನಾ ಅನುಜ್ಞಾಪತ್ರ, ಚಾಲನಾ ಅನುಜ್ಞಾ ಪತ್ರ ನವೀಕರಣ, ನಕಲು ನೋಂದಣಿ ಪ್ರಮಾಣ ಪತ್ರ, ಬಿಡುಗಡೆ ಪ್ರಮಾಣ ಪತ್ರಗಳನ್ನು ಸಂಪೂರ್ಣವಾಗಿ ಆನ್‌ಲೈನ್ ಮೂಲಕ ದೊರಕುವಂತೆ ಮಾಡಲು ಉದ್ದೇಶಿಸಲಾಗಿದೆ. ಆನ್‌ಲೈನ್ ಸೇವೆ ಪಡೆಯಲು ವಾಹನ ಮಾಲೀಕರು/ ಚಾಲನಾ ಅನುಜ್ಞಾ ಪತ್ರ ಹೊಂದಿರುವ ವ್ಯಕ್ತಿಯ ಮೊಬೈಲ್ ಸಂಖ್ಯೆಯನ್ನೇ ಬಳಸುವುದು ಅವಶ್ಯಕವಾಗಿರುವುದರಿಂದ ಸಂಬಂಧಪಟ್ಟವರು parivahan.gov.in ಪೋರ್ಟಲ್‌ನಲ್ಲಿ ತಮ್ಮ ಮೊಬೈಲ್ ಸಂಖ್ಯೆಗಳನ್ನು ಪರಿಷ್ಕರಿಸುವಂತೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.